# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 1048(1297)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ವಿಷಯ : 2ನೇ ಹಂತದ ಕೋವಿಡ್-19 ವ್ಯಾಕ್ಸಿನ್ ಚುಚ್ಚುಮದ್ದು

(ಅ) ದಿನಾಂಕ: 01.03.2021ರಿಂದ ದೇಶಾದ್ಯಂತ 2ನೇ ಹಂತದ ಕೋವಿಡ್-19 ವ್ಯಾಕ್ಸಿನ್ ಚುಚ್ಚುಮದ್ದು ನೀಡಲು ನೋಂದಣಿ ಪ್ರಕ್ರಿಯೆ ಕೇಂದ್ರ ಸರ್ಕಾರದ COWIN PORTAL ನಲ್ಲಿ ಆರಂಭಗೊಂಡಿದ್ದು, ಈ ರೀತಿ ಚುಚ್ಚುಮದ್ದು ಪಡೆಯಲು ಅರ್ಹರಾಗಿರುವ ನಾಗರಿಕರು ಸ್ವಯಂ ನೋಂದಣಿ ಮಾಡಲು ಪ್ರಯತ್ನಿಸಿದಾಗ COVIN Online Portal ಅಥವಾ ಆರೋಗ್ಯ ಸೇತು ಅಪ್ಲಿಕೇಷನ್ ಸರಿಯಾಗಿ ಕಾರ್ಯ ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು;

(ಆ) ಇಂತಹ Software ದೋಷಗಳ (Glitches) ಅನ್ನು ತುರ್ತಾಗಿ ಸರಿಪಡಿಸದಿದ್ದಲ್ಲಿ, ನಾಗರಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಎಂಬುದು ಸರ್ಕಾರ ಗಮನಿಸಿದೆಯೇ; ದೋಷಗಳನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮವೇನು;

(ಇ) ಮೊದಲ ಹಂತದಲ್ಲಿ Covid-19 Vaccine - ಚುಚ್ಚುಮದ್ದು ಪಡೆದ ಆರೋಗ್ಯ ಸೇನಾನಿಗಳಲ್ಲಿ ಬಹುತೇಕ ಮಂದಿಗೆ ಸೌಮ್ಯವಾಗಿ ಜ್ವರ, ಶೀತ, ಕೆಮ್ಮು, ನೆಗಡಿ, ಮೈಕೈ ನೋವು ಕಾಣಿಸಿಕೊಂಡಿರುವುದು ನಿಜವೇ; ಇದನ್ನು ಪರಿಹರಿಸಲು ಸರ್ಕಾರ ಕೈಗೊಂಡ ಮುಂಜಾಗ್ರತಾ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಈ) Covid-19 Vaccine - ಚುಚ್ಚುಮದ್ದು ಪಡೆದ ನಾಗರಿಕರಲ್ಲಿ ಒಂದು ವೇಳೆ ಆರೋಗ್ಯದಲ್ಲಿ ಚೇತರಿಸಿಕೊಳ್ಳಲಾಗದ ದುಷ್ಪರಿಣಾಮಗಳು ಮತ್ತು ಸಾವು-ನೋವುಗಳು ಉಂಟಾದಲ್ಲಿ ಇಂತಹ ನೊಂದ ಸಂತ್ರಸ್ಥರಿಗೆ ಪರಿಹಾರ ಒದಗಿಸಲು ಸರ್ಕಾರ ಸಮೂಹಿಕ ಜೀವವಿಮೆ ವ್ಯವಸ್ಥೆ ಕಲ್ಪಿಸಿದೆಯೇ; ಅಥವಾ ಸಂಬಂಧಸಿದ Covid- Vaccine ಉತ್ಪಾದಕರೊಂದಿಗೆ

ಇಂತಹ ಪ್ರಕರಣಗಳಲ್ಲಿ ಪರಿಹಾರ ನೀಡುವಂತೆ ಒಪ್ಪಂದ ಮಾಡಿಕೊಳ್ಳಲಾಗಿದೆಯೇ ; ಇಂತಹ ಸಾವು - ನೋವು ಪ್ರಕರಣಗಳಲ್ಲಿ ಸರ್ಕಾರ ಸಂತ್ರಸ್ತರಿಗೆ, ಸಂತ್ರಸ್ತರ ಕುಟುಂಬದ ನೆರವಿಗಾಗಿ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ಮಾಹಿತಿ ಒದಗಿಸುವುದು)